ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 42ನೇ ಸಂಚಿಕೆ ಕೊಪ್ಪ 12-7-1987 ಭಾನುವಾರ ಬೆಲೆ 50 ಪೈಸೆ

ಆಗಸ್ಟ್ 15ರೊಳಗೆ ಎಲ್ಐಸಿ ಶಾಖೆ ಆರಂಭ

ಕೊಪ್ಪ: ಇಲ್ಲಿಗೆ ಮಂಜೂರಾಗಿರುವ ಜೀವ ವಿಮಾ ಶಾಖಾ ಕಚೇರಿ ಆಗಸ್ಟ್ 15ರ ವೇಳೆಗೆ ಕಾರ್ಯಾರಂಭ ಮಾಡುವುದೆಂದು, ಇಲ್ಲಿ ಅಭಿವೃದ್ಧಿ ಅಧಿಕಾರಿಯಾಗಿದ್ದು ಬಡ್ತಿ ಹೊಂದಿರುವ ಅನಂತ ರಾಮಯ್ಯ 'ಮುಂಜಾವು'ಗೆ ತಿಳಿಸಿದ್ದಾರೆ.

ಭಾರತ್ ರೈಸ್ ಮಿಲ್ ರಸ್ತೆಯಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಖಾಸಗಿ ಬಂಗ್ಲೆಯೊಂದು ಈ ಕಚೇರಿಗಾಗಿ ಆಯ್ಕೆಯಾಗಿದ್ದು ಕೆಲವು ಮಾರ್ಪಾಡುಗಳು ಆಗಬೇಕಾಗಿವೆ. ಶಾಖಾ ಮ್ಯಾನೇಜರ್ ರಾಮಚಂದ್ರ ರಾವ್ ಅಧಿಕಾರ ವಹಿಸಿಕೊಂಡಿದ್ದು, ಸದ್ಯಕ್ಕೆ ಚಿಕ್ಕಮಗಳೂರು ಕಛೇರಿಯಲ್ಲಿ ಪೂರ್ವಭಾವಿ ಸಿದ್ಧತೆಯಲ್ಲಿ ತೊಡಗಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಕೊಪ್ಪದ ಶಂಕರ್ ಸಾರಿಗೆ ಸಂಸ್ಥೆಯಲ್ಲಿ

ಮುರಿದ ಸಂಧಾನ: ಜುಲೈ 18ರಿಂದ ಮುಷ್ಕರ

ಕೊಪ್ಪ: ಚಿಕ್ಕಮಗಳೂರಿನ ಉಪಕಾರ್ಮಿಕ ಕಮಿಷನರ್ ಅವರ ಮಧ್ಯಸ್ಥಿಕೆಯಲ್ಲಿ ಜುಲೈ 9 ರಂದು ಶಂಕರ್ ಸಂಸ್ಥೆಯ ಕಾರ್ಮಿಕ ಮುಖಂಡರು ಮತ್ತು ಮಾಲೀಕರ ನಡುವೆ ನಡೆದ ಮೂರನೇ ಮಾತುಕತೆ ಸಹ ಮುರಿದು ಬಿದ್ದಿದ್ದು, ಜುಲೈ 18 ರಿಂದ ಕೆಲಸ ನಿಲ್ಲಿಸಿ ಪೂರ್ಣ ಪ್ರಮಾಣದ ಮುಷ್ಕರ ನಡೆಸುವುದಾಗಿ ಕಾರ್ಮಿಕರ ಸಂಘ ನಿರ್ಣಯಿಸಿದೆ

ಜುಲೈ 18 ರಂದು ಬೆಳಿಗ್ಗೆ 6 ಗಂಟೆಯಿಂದ ಬಸ್ಸುಗಳನ್ನು ಇದ್ದ ಸ್ಥಳದಲ್ಲೇ ಬಿಟ್ಟು ಕಾರ್ಮಿಕರು ಅನಿರ್ದಿಷ್ಟ ಕಾಲ ಮುಷ್ಕರ ನಡೆಸಲಿದ್ದಾರೆ.

"ಸಂಧಾನ"

ಸಂಧಾನದ ವೇಳೆ, ಕಾರ್ಮಿಕರ ಪ್ರಮುಖ ಬೇಡಿಕೆಗಳಾದ ಮೂಲ ವೇತನ ಹೆಚ್ಚಳ, 8 ಗಂಟೆ ದುಡಿಮೆ, ಹೆಚ್ಚುವರಿ ಕೆಲಸಕ್ಕೆ ಭತ್ಯ, ಪ್ರತೀಕಾರದ ವರ್ಗಾವಣೆಗಳ ರದ್ದು ಅಥವಾ ನಿಲುಗಡೆ ಮುಂತಾದುವುಗಳನ್ನೆಲ್ಲ ತಿರಸ್ಕರಿಸಿ, "ವರ್ಷಕ್ಕೆ 1 ಜೊತೆ ಚಪ್ಪಲಿ, ವರ್ಷಕ್ಕೆ 5 ರಜೆ, ತಿಂಗಳಿಗೆ 15 ರೂ.ಮನೆ ಬಾಡಿಗೆ ಭತ್ಯ" ಮಾತ್ರ ಕೊಡುವುದಾಗಿ ಮಾಲೀಕರು ಹೇಳಿದ್ದರಿಂದ ಸಂಧಾನ ಮುರಿದು ಬಿದ್ದಿತೆಂದು ಸಂಘದ ಪ್ರಕಟಣೆ ತಿಳಿಸಿದೆ.

ಮಾಲೀಕರ "ಕೈಗೊಂಬೆ" ಸಂಘದ 'ಪ್ರತಿನಿಧಿಗಳನ್ನು' ಸಹ, ಈ ಕಾರ್ಮಿಕ ಸಂಘ ಸಲ್ಲಿಸಿದ್ದ ಬೇಡಿಕೆ ಪಟ್ಟಿ ಆಧಾರದ ಮೇಲೆ ನಡೆದ ಸಂಧಾನ ಸಭೆಗೆ ಹಾಜರು ಪಡಿಸಲು ಮಾಲೀಕರು ಪ್ರಯತ್ನಿಸಿ ಕಾರ್ಮಿಕರು ಪ್ರತಿಭಟಿಸಿದಾಗ ಹಿಂತೆಗೆದುಕೊಂಡರೆಂದು ಸಂಘದ ಪ್ರಧಾನ ಕಾರ್ಯದರ್ಶಿ ಎಚ್. ಎಂ. ರೇಣುಕಾರಾಧ್ಯ ತಿಳಿಸಿದ್ದಾರೆ.

ರಾಷ್ಟ್ರೀಕರಣ ?

ಈ ಮಧ್ಯೆ, ಕಾರ್ಮಿಕರ ಬೇಡಿಕೆಗಳು, ಮಾಲೀಕರ ಕಾರ್ಮಿಕವಿರೋಧಿ ಬಿಗಿ ನೀತಿ ಮುಂತಾದುವುಗಳ ಬಗ್ಗೆ ಸಿಪಿಐ ಶಾಸಕ ಎಂ.ಎಸ್.ಕೃಷ್ಣನ್ ಸಾರಿಗೆ ಸಚಿವ ಸಿಂಧ್ಯರಿಗೆ ಬರೆದಿದ್ದ ಪತ್ರಕ್ಕೆ ಅವರು ಉತ್ತರಿಸಿದ್ದು, ಕಾರ್ಮಿಕರ ಬೇಡಿಕೆಗೆ ಸಹಾನುಭೂತಿ ತೋರಿಸಿದ್ದಾರೆ.

ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸುವಂತೆ ಸಾರಿಗೆ ಕಮಿಷನರ್ ರಿಗೂ, ಮುಷ್ಕರದ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಬದಲಿ ವ್ಯವಸ್ಥೆ ಮಾಡಲು ರಸ್ತೆ ಸಾರಿಗೆ ಸಂಸ್ಥೆಗೂ ತಾನು ಪತ್ರ ಬರೆದಿರುವುದಾಗಿ ಸಿಂಧ್ಯಾ ತಿಳಿಸಿದ್ದಾರೆ.

ಜನತಾ ಸರ್ಕಾರವು ರಾಷ್ಟ್ರೀಕರಣ ನೀತಿಗೆ ಬದ್ಧವಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಈ ಸಂಸ್ಥೆ ಹಾಗೂ ಅಲ್ಲಿನ ಕಾರ್ಮಿಕರನ್ನೊಳಗೊಂಡಂತೆ ರಾಷ್ಟ್ರೀಕರಿಸುವ ಬಗ್ಗೆ ಪರಿಶೀಲಿಸುವುದಾಗಿ ಸಹ ಸಿಂಧ್ಯಾ ತಿಳಿಸಿದ್ದಾರೆ.

ತಮ್ಮ ಈ ನ್ಯಾಯಯುತ ಹೋರಾಟದಲ್ಲಿ ಸಾರ್ವಜನಿಕರು ಸಹಾನುಭೂತಿಯನ್ನೂ ಸಹಕಾರವನ್ನೂ ನೀಡಬೇಕಾಗಿ ಕಾರ್ಮಿಕರು ವಿನಂತಿಸಿದ್ದಾರೆ.

ವಿವಿಧೆಡೆ ಸಭೆ, ಮೆರವಣಿಗೆ

ಜುಲೈ 18ರ ಚಳುವಳಿಗೆ ಬೆಂಬಲ ಸೂಚಿಸಲು ಜುಲೈ 11 ಆಲ್ದೂರು, ನ. ರಾ. ಪುರ, 12 ಬಾಳೆಹೊನ್ನೂರು, ಬಸರಿಕಟ್ಟೆ, ಕಳಸ, 13 ಶೃಂಗೇರಿ ಮತ್ತು ತೀರ್ಥಹಳ್ಳಿಗಳಲ್ಲಿ ಎಐಟಿಯುಸಿ ಆಶ್ರಯದಲ್ಲಿ ಮೆರವಣಿಗೆ, ಬಹಿರಂಗ ಸಭೆ ನಡೆಸುವುದಾಗಿ ಸಂಘ ಹೇಳಿದೆ.

ಶೃಂಗೇರಿ ವಾಹನ ಚಾಲಕರ ಸಂಘದ ಬೆಂಬಲ

ಶೃಂಗೇರಿ: ಇಲ್ಲಿ ಜು. 5 ರಂದು ನಡೆದ ವಾಹನ ಚಾಲಕರ ಸಂಘದ ಸಭೆಯು, ಹಲವು ದಿನಗಳಿಂದ ಚಳುವಳಿ ನಡೆಸುತ್ತಿರುವ ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರಿಗೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಈ ಕಾರ್ಮಿಕರ ಎಲ್ಲಾ ನ್ಯಾಯಯುತ ಬೇಡಿಕೆಗಳನ್ನು ಕೂಡಲೇ ಈಡೇರಿಸುವ ಮೂಲಕ ಸಾರ್ವಜನಿಕರಿಗೆ ಆಗಬಹುದಾದ ತೊಂದರೆಗೆ ಅವಕಾಶ ಕೊಡದಿರುವಂತೆ ಸಂಸ್ಥೆಯ ಮಾಲೀಕರನ್ನು ಒತ್ತಾಯಿಸಿದೆ.

50 ಕಿಲೊ ಗಂಧ ವಶ; ಒಬ್ಬನ ಬಂಧನ

ಕೊಪ್ಪ: ಭದ್ರಾವತಿಯಿಂದ ಉಡುಪಿಗೆ ಹೋಗುವ ಮಿನಿ ಬಸ್ಸಿನಲ್ಲಿ ಜು. 6ರ ಬೆಳಿಗ್ಗೆ ಸಾಗಿಸುತ್ತಿದ್ದ 50 ಕಿಲೋ ಗಂಧವನ್ನು ಇಲ್ಲಿನ ಪೋಲೀಸರು ಪತ್ತೆ ಹಚ್ಚಿ ಬೆಳಗೊಳದ ಕೃಷ್ಣಮೂರ್ತಿ ಎಂಬವನನ್ನು ಬಂಧಿಸಿದ್ದು, 15 ದಿನ ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ

ಕುದುರೆಗುಂಡಿ ಸಮೀಪದ ಗುಡ್ಡೆಹಳ್ಳ ಎಂಬಲ್ಲಿ 2 ಮರ ಕಡಿದುದನ್ನು ಆತ ತೋರಿಸಿದ್ದು ಅದರ ಬಡ್ಡೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣದ ಮುಖ್ಯ ಆರೋಪಿ ದಾವಣದ ಚಂದ್ರ ಎಂಬವ ತಲೆ ತಪ್ಪಿಸಿಕೊಂಡಿದ್ದು ಸಬ್‌ಇನ್‌ಸ್ಪೆಕ್ಟರ್ ದುರ್ಗಯ್ಯ ತನಿಖೆ ನಡೆಸುತ್ತಿದ್ದಾರೆ.

ಮಲೆನಾಡಿನ ಜಯಪುರದಲ್ಲಿ ಮಳೆಗಾಲದಲ್ಲೂ ನೀರಿನ ಅಭಾವ !

(ವರದಿ : ಕೃಷ್ಣ ಭಂಡಾರಿ)

ಜಯಪುರ: ಇದು ಪ್ರಕೃತಿ ಸೌಂದರ್ಯದ ತವರೂರಷ್ಟೇ ಅಲ್ಲ; ಹಳ್ಳ-ಕೊಳ್ಳ, ಪ್ರಕೃತಿದತ್ತವಾದ ನೀರಿನ ಝರಿಯಿಂದ ವರ್ಷವಿಡೀ ಹರಿಯುವ 'ಸೀತಾ ನದಿ'; ಸದಾ ಶುದ್ಧವಾದ ಸುಣ್ಣದ ಮಣ್ಣಿನ ಪದರದೊಳಗಿಂದ ಹರಿಯುವ ಸೀತಾ ಕಣಿವೆಯ ನೀರು— ಇಷ್ಟಿದ್ದೂ ಈ ಊರಿಗೆ ಕುಡಿಯುವ ನೀರಿನ ಅಭಾವ !

ಇತ್ತೀಚೆಗಂತೂ ಬೆಳಿಗ್ಗೆ 8 ಗಂಟೆಯವರೆಗೆ ನಲ್ಲಿಯ. ಮುಂದೆ ತಪಸ್ಸು ಮಾಡಿದ ಮೇಲೆ ಇಳಿಯುವ ಕೆಂಪಾದ ಮಡ್ಡಿ ಕೆಸರಿನಿಂದ ತುಂಬಿದ ಕೊಳಕು ನೀರು. ಅದೂ ಅರ್ಧ ಗಂಟೆಯ ಒಳಗೆ ನಿಂತು ಹೋಗುವ ಈ ನೀರಿಗೆ 48 ರೂ.ಗಳ ಕರಭಾರದ ದಂಡ ತೆರಬೇಕು. ತಿಂಗಳಿಗೆ ಒಂದೆರಡು ಬಾರಿ ಮಾರ್ಗಮಧ್ಯೆ ಉದ್ಭವವಾಗುವ ಗಂಗಾವತರಣ!

ಒಳ್ಳೆಯ ನೀರು ಸರಬರಾಜಿಗಾಗಿ ಭೂಮಿಯಡಿಯಲ್ಲಿ ಹತ್ತಿರ ಹತ್ತಿರ ಎರಡು ಲಕ್ಷ ರೂ. ಬೆಲೆಯ ನಲ್ಲಿಗಳನ್ನು ಹುಗಿದು ಕೆಲವು ವರ್ಷಗಳೇ ಸಂದು ಹೋಗಿವೆ. ಈ ಬಗ್ಗೆ ಹಲವಾರು ಬಾರಿ ಕ್ಷೇತ್ರದ ಶಾಸಕರಾದ ಗೋವಿಂದ ಗೌಡರಿಗೆ ಮನವಿ ಅರ್ಪಿಸಿದ್ದು ಸಾಲದೆಂಬಂತೆ ಇಲ್ಲಿಂದ ಹಾದು ಹೋಗುವ ಮಂತ್ರಿಗಳಿಗೆಲ್ಲ ಒಂದೊಂದು ಮನವಿ ಅರ್ಪಿಸಿದರೂ ಪರಿಣಾಮ ಮಾತ್ರ ಸೊನ್ನೆ. ಇತ್ತೀಚೆಗೆ ಇಲ್ಲಿಗಾಗಮಿಸಿದ ಮಂತ್ರಿ ಬಿ.ಎಲ್ ಶಂಕರ್ ಗಮನಕ್ಕೂ ಈ ವಿಚಾರ ತರಲಾಗಿತ್ತು.

ಈಚೆಗೆ ನಡೆದ ಮಂಡಲ ಪಂಚಾಯ್ತಿ ಚುನಾವಣೆಗಳಲ್ಲಿ ಈ ಸಮಸ್ಯೆ ಎಲ್ಲ ಸ್ಪರ್ಧಾಳುಗಳಿಗೂ ಒಂದು ಅಸ್ತ್ರ(ಬಂಡವಾಳ)ವಾಗಿತ್ತು. 2 ಮೈಲಿ ದೂರದಲ್ಲಿ ಕಾಡಿನೊಳಗಿರುವ ನೀರಿನ ಕಟ್ಟೆಗೆ ಓಡುವುದೇನು, ಟ್ಯಾಂಕಿನ ಮೇಲಕ್ಕೆ ಹತ್ತುವ ಸರ್ಕಸ್ಸೇನು! ಈಗ ಮಾತ್ರ ಯಾರೂ ದಿಕ್ಕಿಲ್ಲ! ಎನ್ನುತ್ತಿದ್ದಾರೆ ಜನ.

ವೇದಿಕೆ

ಓದುಗರ ಪ್ರತಿಕ್ರಿಯೆಗಳು

20. ಅಯ್ಯೋ ದೇವ್ರೆ! ಸನ್ಯಾಸಿಗೇನ್ಗೊತ್ತು ಸಂಸಾರದ್ನೋವು!?

ಸಿರಿಮನೆ ಕುಟುಂಬದಲ್ಲಿ ಬಹಿಷ್ಕಾರ!

"ಹಾಕ್ಲಿ ಬಿಡಿ, ಏನು ಪ್ರಪಂಚ ಮುಳ್ಗೋಯ್ತೆ?"

ಸಿರಿಮನೆ ನಾಗರಾಜ್‌ರಿಗೆ ಇದು ಹೊಸತು. (ನಮಗೆ ಹಳತು. ಇದನ್ನೆಲ್ಲ ಕೇಳಿ ಸಾಕಾಗಿ ಸುಮ್ಮನಿದ್ವಿ; ಈಗ ಸ್ನೇಹಿತರ ನೋವಿನಲ್ಲಿ ಪಾಲ್ಗೊಂಡಿದ್ದು ಅಷ್ಟೆ.) ಅದರಲ್ಲೂ ತಂದೆ- ತಮ್ಮಂದಿರ ಬಾಂಧವ್ಯವಿದೆ, ತಾಯಿಯ ಕರುಳಿನ ಕರೆ ಇದೆ, ಅಕ್ಕ-ತಂಗಿಯರ ರಕ್ತ ಸಂಬಂಧವಿದೆ, ಎಲ್ಲರೂ ಇರುವಂತೆ ಕುಟುಂಬದಲ್ಲಿ ನಗು ನಗುತ್ತಾ ಇರಬೇಕಾದ್ದು; ಇರಲು ಬಿಡಲಿಲ್ಲವಲ್ಲ ಅನ್ನೋ ನೋವಿದೆ. ಈ ನಮ್ಮ ಸಮಾಜದಲ್ಲಿ ಚಿನ್ನದಂಥಾ ಹೆಣ್ಮಕ್ಳು ಜಾತಕ–ಪಾತಕ ಅಂತ, ವರದಕ್ಷಿಣೆ ಅನ್ನೋ. ಕ್ಯಾಪಿಟೇಶನ್ನು–ಡೊನೇಶನ್ನು ಅಂತ, ಹೀಗೆ ನಾನಾ ಕಾರಣಕ್ಕೆ ವರ್ಷ ಮೂವತ್ತಾದ್ರೂ ಮದುವೆಯಾಗ್ದೆ ಉಳೀತಾರಲ್ಲ, ಮದುವೆಯಾದ್ರೂ ನರಳ್ತಾರಲ್ಲ; ಇದರಿಂದ ಉಳಿಯೋಕೇನಾರೂ ದಾರಿ ಉಂಟಾ ಅಂತ ಅವರು–ಅವರ ಅಪ್ಪಮ್ಮಂದಿರು ಯೋಚ್ನೆ ಮಾಡೋಕ್ಹೊರಟ್ರೆ ಅವರ ಮೇಲೆ 'ಸಮಾಜ, ಸಮಾಜ' ಅಂದ್ಕೋತಾ ಯಾರೋ ಹಿಡಿಯಷ್ಟು ಮಂದಿ ತಮ್ಮ ದುರಭಿಪ್ರಾಯಾನ ಹೇರ್ತಾರಲ್ಲ–ಅಂತನ್ನೋ ನೋವೂ ಇದೆ. ಆ ನೋವುಗಳೆಲ್ಲ ಸೇರಿ ನಾಲ್ಕು ಪುಟ ಬರ್ಸಿದೆ.

ಅವರು ಬರ್ಯೋಕ್ಮುಂಚೆ ಯೋಚ್ನೆ ಮಾಡಬಾರ್ದ–"ಈ ನನ್ನ ನೋವು ಸಮಾಜಕ್ಕಾಗಲಿ, ಸ್ವಾಮಿಗಾಗಲಿ ಇದಿಯಾ?" ಅಂತ.

ಹೋಗ್ಲಿ, ನಾವು ಯೋಚ್ನೆ ಮಾಡೋಣ–"ನಿಜಕ್ಕೂ ಇದಿಯಾ?" ಅಂತ. ಈ ನೋವು ಸ್ವಾಮೀಜಿಗೆಲ್ಬಂತು!.... ಈ ನೋವಿದ್ರೆ ಸ್ವಾಮಿ ಹೇಗಾಗ್ತಾರೆ? ಇದು ಸ್ವಾಮಿಗಳ ತಪ್ಪೆ? ಖಂಡಿತ ಅಲ್ಲ.

ಜಾತಿ–ಜಾತಿಗೆ ವೈರಿ, ಸ್ವಾಮಿ–ಸ್ವಾಮಿಗೆ ವೈರಿ ಅನ್ನೋ ನಾಣ್ನುಡಿ ಯಾರಿಗ್ಗೊತ್ತಿಲ್ಲ? ಇಲ್ಲಿ ತಪ್ಪುಮಾಡಿದ್ದು ಇನ್ನೊಂದು ಸ್ವಾಮಿ. ಬರೇ ಸ್ವಾಮಿ ಅಂದ್ಕೊಂಡಿದ್ರೆ ಏನ್ ಗಂಟ್ಹೋಗ್ತಿತ್ತು; ಹೆಚ್ಗಾರ್ಕೆಗಾಗಿ ಇನ್ನೂ ಎರಡಕ್ಷರ ಜಾಸ್ತಿ ಸೇರ್ಸ್ಕೊಂಡು "ಸಿದ್ಧುಸ್ವಾಮಿ" ಆಗಿದ್ದೇಕೆ? ಇದು ನಿಜ ಸ್ವಾಮಿಗಳಿಗೆ ಅಲರ್ಜಿ ಆಗ್ಲಿಲ್ವಾ? ಸ್ವಾಮಿಗಳಿಗೆ ಅಂತಅಲ್ಲ, ಯಾರಿಗೇ ಆದ್ರೂ ಅಲರ್ಜಿ ಆದ್ರೆ ಅವರು ರೇಗೋದಿಲ್ವಾ, ಹಾಗೆ.... ಈ ಸ್ವಾಮಿಗಳೂ ರೇಗಿದ್ದಾರೆ.

ನಾಗರಾಜ್‌ಗೆ ಬುದ್ಧಿ ಉಂಟಾ? ಮೀನು-ಮಾಂಸ ತಿನ್ನೋರು ಅಂತ ಪತ್ರಿಕೆಯಲ್ಲೆಲ್ಲಾ ಬರ್ದು ಇನ್ನೂ ಅಲರ್ಜಿ ಮಾಡಿದ್ದೇಕೆ? ಬಹಿರಂಗ ಹೇಳ್ಕೊಂಡು ಎರಡ್ನೇ ಗುಂಡೂರಾವ್ ಆದದ್ದೇಕೆ! ಹಾಗ್ಮಾಡ್ಕೊಳ್ದೇ ಹೋಗಿದ್ರೆ ಯಾರಾದ್ರೂ, ಇವರ್ನ ಕೇಳ್ತಿದ್ರಾ? ಸಂದು ಗೊಂದಲ್ಲಿರೊ ಬಾರ್–ಮಿಲ್ಟ್ರಿ ಹೋಟ್ಲಗೆ ಇದ್ದಿಲ್ದೆ ಬಂದ್ಹೋಗೊ ನನ್ನ ಮಿತ್ರರ ಬಗ್ಗೆ ಸ್ವಾಮೀಜಿ ಎಂದಾದ್ರೂ ಚಕಾರ ಎತ್ತಿದ್ದುಂಟಾ?.... ಅಯ್ಯೊ ಪಾಪ, ಇಷ್ಟು ಪಾಪದವರಿಗೆ ಪುಟಗಟ್ಲೆ ಬರ್ದು ಪತ್ರಿಕೆ ತುಂಬ್ಸಿದ್ದೇಕೆ? 'ಮನಸ್ಸಿಗೆ ಬಂದ್ಹಂಗೆ'ಬರ್ದಿದ್ರಿಂದ, ನಾಗರಾಜ್ ಸ್ವಾಮಿಗಿಂತ ಹೆಚ್ಚವ್ರು ಆದ್ಹಂಗಾಯ್ತು? ಇಲ್ಲ ಅಂತ ಇಟ್ಕೊಳ್ಳಿ.... ಆದ್ರೆ ಈ ಸ್ವಾಮಿಗಳು ಶಂಕರಾಚಾರ್ಯರಿಗಿಂತ ಹೆಚ್ಚವ್ರಾ? ಹೌದೂಂತ್ಲೇ ಇಟ್ಕೊಳ್ಳಿ. ಹಾಗಾದ್ರೆ ಈ ಸ್ವಾಮಿಗಳು ಯಾರ ಕಾಲಿಗ್ಬಿದ್ದಿದ್ದಾರೆ (ಇದಕ್ಕೆ 'ಶಂಕರಾಚಾರ್ಯ' ಸಿನಿಮಾ ನೋಡಿ) ನಮಗ್ಗೊತ್ತಿಲ್ಲ; ಗೊತ್ತಿದ್ದೋರು ತಿಳ್ಸಿ.

"ಈ ಸಿನಿಮಾ—ಪತ್ರಿಕೆಗಳವರಿಗೆಲ್ಲ ತಲೆಪೂರ ಕೆಟ್ಹೋಯ್ತಾ? 'ಶಂಕರಾಚಾರ್ಯ'ರಂತೆ, 'ಘಟಶ್ರಾದ್ಧ' ಅಂತೆ. ಇವುಗಳ್ನೆಲ್ಲಾ

(ಮೂರನೇ ಪುಟಕ್ಕೆ)

21. "ಕಟ್ಟುಪಾಡುಗಳು ಬೇಕೇ ಬೇಕು"

ಮಾನ್ಯರೇ,

ಯಾವುದೇ ಸಂಘ–ಸಂಸ್ಥೆಗಳಾಗಲೀ, ಗುರುಮಠಗಳಾಗಲೀ ತಮ್ಮದೇ ಆದ ಜಾತಿ, ಮತ, ಸಂಪ್ರದಾಯ, ಕಟ್ಟುಪಾಡುಗಳಿಗೆ ಹೊಂದಿಕೊಂಡೇ ಹೋಗಬೇಕಾಗುತ್ತದೆ. ಜಾತ್ಯತೀತ ಮನೋಭಾವನೆಯನ್ನು ಅರ್ಥ ಮಾಡಿಕೊಳ್ಳುವ ಸಮಾಜ ನಿರ್ಮಾಣವಾಗುವ ತನಕ ತನ್ನದೇ ಆದ ಸಂಪ್ರದಾಯಬದ್ಧ ಸಮಾಜದ ವರ್ತುಲದಲ್ಲೇ ಇರುವ ಗುರುಮಠಗಳಾಗಲೀ, ಮಠದ ಹಿರಿಯರಾಗಲೀ ಈ ಕಟ್ಟುಪಾಡುಗಳಿಂದ ಹೊರ ಬರಲು ಸಾಧ್ಯವಿಲ್ಲ. ಅಷ್ಟೇ ಏಕೆ, ಹಿಂದೂ ಸಮಾಜದ ಏಳಿಗೆಗಾಗಿ ದುಡಿದ ಸ್ವಾಮಿ ವಿವೇಕಾನಂದರ ಪರಂಪರೆಯ ಹಿಂದೂ ಸಮಾಜವೂ ಕಟ್ಟುಪಾಡುಗಳಿಂದ ಹೊರಬಂದು ಜಾತ್ಯತೀತ ಸಮಾಜವನ್ನು ನಿರ್ಮಿಸಲು ಸಾಧ್ಯವಿಲ್ಲ.

—ಕೆ. ಎಸ್. ಶ್ರೀಧರ, ಶಿವಮೊಗ್ಗ.

22. "ಸಾಧನೆಯೇ ಹೌದು"

ಪ್ರಿಯ ಸಂಪಾದಕರೆ.

'ಮುಂಜಾವು' 5–7–1987ರ ಸಂಚಿಕೆಯಲ್ಲಿ ಭುಜಂಗರಾವ್‌ರವರ ಪತ್ರ ನೋಡಿ ಆಶ್ಚರ್ಯವಾಯ್ತು. "ಹಿಂದೆ ಈ ರೀತಿ ಎಷ್ಟೋ ನಡೆದಿದೆ, ಮುಂದೆ ಬೇಕಾದಷ್ಟು ನಡೆಯುತ್ತದೆ" ಎಂದಿದ್ದಾರೆ. ಮುಂದೆ ಬೇಕಾದಷ್ಟು ನಡೆಯಬಹುದು. ಅಲ್ಲದೆ ನಡೆಯಲೇ ಬೇಕು. ನಡೆಯದಿದ್ದರೂ ಕಾಲ ಬಿಡುವುದಿಲ್ಲ, ನಡೆಸುತ್ತದೆ. ಆದರೆ ಹಿಂದೆ ಇಂಥದು ಎಲ್ಲಿ ನಡೆದಿದೆ? ಸ್ವಲ್ಪ ತಿಳಿಸುವಿರಿ? ಸಮಾಜವನ್ನು, ಮನೆಯ ನಿರ್ಬಂಧವನ್ನು ಧಿಕ್ಕರಿಸಿ ಪ್ರೀತಿಸಿ ಮದುವೆ ಆಗಿರಬಹುದು. ಆದರೆ ಮನೆಯವರೇ ಮುಂದೆ ನಿಂತು, ಸಮಾಜದ ಮೇಲ್ವರ್ಗಗಳಿಂದ ತುಳಿದೂ ತುಳಿದೂ ಹೂತು ಹೋಗಲ್ಪಟ್ಟಿರುವ ಒಂದು ವರ್ಗದೊಂದಿಗೆ ಸಂಬಂಧ ಬೆಳೆಸಿದಂತಹ ಮಾನವೀಯತೆ ಎಲ್ಲಿ ನಡೆದಿದೆ?

ಹೌದು, ಈ ರೀತಿ ಆಗಿತ್ತು–ಬಸವಣ್ಣನವರ ಕಾಲದಲ್ಲಿ; 800 ವರ್ಷಗಳ ಹಿಂದೆ. ಇತಿಹಾಸ ಮತ್ತೆ ಪುನರಾವರ್ತನೆಗೊಳ್ಳುತ್ತಿದೆ, ಹೆಚ್ಚು ಸತ್ವಯುತವಾಗಿ. ಖಂಡಿತ ಇದೊಂದು ದೊಡ್ಡ ಸಾಧನೆಯೇ ಹೌದು.

ಕೃಷ್ಣ ಭಂಡಾರಿ,
ಜಯಪುರ.

23. "ವೃಥಾ ಟೀಕೆ, ದೂಷಣೆ ಸಲ್ಲ"

ಮಾನ್ಯರೇ,

ಸುಮಾರು 3–4 ವಾರದಿಂದ 'ಮುಂಜಾವು' ನಲ್ಲಿ ಪ್ರಕಟವಾಗುತ್ತಿರುವ "ಪ್ರಾಯಶ್ಚಿತ್ತ, ಬಹಿಷ್ಕಾರ ಇತ್ಯಾದಿ–ಶೃಂಗೇರಿ ಶಿವಳ್ಳಿ ಬ್ರಾಹ್ಮಣ ಮುಖಂಡರ ಕಲ್ಯಾಣ ಕಾರ್ಯಕ್ರಮ" ಎಂಬ ಬರಹದಡಿ ಬಹಳಷ್ಟು ಪ್ರಕಟವಾಗಿದೆ. ಇದರಲ್ಲಿ ವೃಥಾ ಹರಿಹರಪುರ ಮಠದ ಸ್ವಾಮಿಗಳವರನ್ನು ಮತ್ತು ಬ್ರಾಹ್ಮಣ ಸಂಘದ ಮುಖಂಡರನ್ನು ಟೀಕಿಸಿದ್ದಾರೆ. ಇದು ತಪ್ಪು.

ಹರಿಹರಪುರ ಸ್ವಾಮಿಗಳ ಶಿಷ್ಯ ಸಮೂಹಕ್ಕೆ ನಾವೂ ಸೇರಿದವರು. ನಿಮ್ಮ ಮನೆಯವರ ವಿಚಾರ ಪತ್ರಿಕೆಯಲ್ಲಿ ಬರೆಯಲು ಅವರ ಅವಶ್ಯಕತೆ ನಿಮಗೆ ಏನಿತ್ತು? ಸಿರಿಮನೆ ರಾಮಯ್ಯನವರು ಮತ್ತು ಅವರ ಹಿರಿಯ ಇಬ್ಬರು ಮಕ್ಕಳು ಸ್ವಾಮಿಗಳಲ್ಲಿ ಸಲಹೆ ಕೇಳಿದ್ದಕ್ಕೆ ಧರ್ಮ ಶಾಸ್ತ್ರದ ಪ್ರಕಾರ ಸೂಚಿಸಿದ್ದಾರೆ. ಅದನ್ನೇ ಪ್ರಮಾದವೆಂದು ಅವರನ್ನೂ ಅವರ ಶಿಷ್ಯ ಸಮೂಹವನ್ನೂ ದೂಷಿಸುವುದರಿಂದ ಒಳಿತಲ್ಲ. ಸಿರಿಮನೆ ರಾಮಯ್ಯನವರು ಈ ವಿಷಯದ ಬಗ್ಗೆ ಸ್ಪಷ್ಟ ಹೇಳಿಕೆ ನೀಡಲಿ. ('ಶೃಂಕೊಸ'ದಲ್ಲಿ ನೀಡಿದಂತೆ ನಿಮ್ಮ ಪತ್ರಿಕೆಯಲ್ಲೂ ಪ್ರಕಟಿಸಿ)

—ಕೇಶವಮೂರ್ತಿ, ದೇವರಮನೆ.
(ತಾ॥ 2–7–87)

(ಈ ಪ್ರಶ್ನೆಗೆ ಉತ್ತರ ನಮ್ಮ 5–7–87ರ ಸಂಚಿಕೆಯಲ್ಲಿದೆ.

—ಸಂ.)

ಸತ್ಯದ ಬೆಳಕಿನಲ್ಲಿ ಚರ್ಚೆ ಮುಂದುವರಿಕೆ

ಪ್ರಿಯ ಓದುಗರೆ,

ಈ ವಿಚಾರದ ಬಗ್ಗೆ ಎಲ್ಲೆಲ್ಲಿನ ಓದುಗರಿಂದೆಲ್ಲ ಪ್ರತಿಕ್ರಿಯೆಗಳು ಇನ್ನೂ ಬರುತ್ತಲಿವೆ. ಈ ನಮ್ಮ ಸಮಾಜದ ಇಷ್ಟೊಂದು ಜನರು ಆಸಕ್ತರಾಗಿರುವ ಈ ವಿಚಾರದ ಬಗ್ಗೆ, ಅದರ ಎಲ್ಲ ಮಗ್ಗಲುಗಳ ಬಗ್ಗೆ ಪರಿಪೂರ್ಣ ಚರ್ಚೆ ನಡೆಯಬೇಕೆಂಬುದೇ ನಮ್ಮ ಉದ್ದೇಶವಾಗಿತ್ತು. ಆದ್ದರಿಂದ ಚರ್ಚೆ ಮುಂದುವರಿಸುತ್ತೇವೆ.

ನಮ್ಮ ಬರಹಗಳಲ್ಲಿ ಹಾಗೂ ಓದುಗರ ಪ್ರತಿಕ್ರಿಯೆಗಳಲ್ಲಿ ಎತ್ತಿರುವ ಪ್ರಶ್ನೆ ಮತ್ತು ಜಿಜ್ಞಾಸೆಗಳಿಗೆ ಸಂಬಂಧಿಸದ ವಿಚಾರಗಳನ್ನೂ, 'ಮಂತ್ರಕ್ಕಿಂತ ಉಗುಳು ಜಾಸ್ತಿ' ಎಂಬ ಗಾದೆಯಂತೆ ವಿಚಾರಕ್ಕಿಂತ ಸುಳ್ಳಿನ ಪ್ರತಿಪಾದನೆ ಮತ್ತು ಅವಹೇಳನಕ್ಕೆ ಪ್ರಾಧಾನ್ಯ ಕೊಡುವ ಪತ್ರಗಳನ್ನೂ, ಬೇನಾಮಿ ಪತ್ರಗಳನ್ನೂ ಪ್ರಕಟಿಸಲಾಗುವುದಿಲ್ಲ.

ಓದುಗರು ಚರ್ಚೆಯನ್ನು ಸಾಧ್ಯವಾದಷ್ಟೂ–ಈ ದೇಶದಲ್ಲಿ ಜಾತ್ಯತೀತ ವಿವಾಹ ಸರಿಯೇ ತಪ್ಪೆ, ಅದು ಬೇಕೇ ಬೇಡವೆ; ವಿವಾಹಕ್ಕೆ ಸಂಬಂಧಪಟ್ಟಂತೆ ನಮ್ಮನ್ನಾವರಿಸಿರುವ ನೂರಾರು ಸಮಸ್ಯೆಗಳು ಮತ್ತು ಅಮಾನುಷ ನಡುವಳಿಕೆಗಳ ಬಗ್ಗೆ ಈ ನಮ್ಮ ಧಾರ್ಮಿಕ–ಸಾಮಾಜಿಕ ಮುಖಂಡರುಗಳ ಮಾತು ಮತ್ತು ನಡುವಳಿಕೆಗಳು ಹೇಗನ್ನಿಸುತ್ತವೆ; ಈ ಇಡೀ ವಿಚಾರ ಹಾಗೂ ಅದರ ವರದಿ ನಮ್ಮ ಸಮಾಜಕ್ಕೆ ಸಂಬಂಧಪಟ್ಟಿರುವಂಥದೇ ಅಥವಾ ವೈಯಕ್ತಿಕವೆ; ಆದ್ದರಿಂದ ಸಂದರ್ಶನ ನಡೆಸಿದ್ದಾಗಲಿ, ವರದಿ ಪ್ರಕಟಿಸಿದ್ದಾಗಲಿ ಸರಿಯೇ ತಪ್ಪೆ; ಯಾವುದೇ ಕಾರಣಕ್ಕೆ ಒಬ್ಬರ ಮನೆಗೆ 'ಇತರರು ಹೋಗಬಾರದು–ಕರೆಯಬಾರದು, ಪ್ರಾಯಶ್ಚಿತ್ತವಾಗಬೇಕು– ಶುದ್ಧ ಪುಣ್ಯಾಹವಾಗಬೇಕು. ತೀರ್ಥ (ಪಂಚಗವ್ಯ) ತೆಗೆದುಕೊಳ್ಳಬೇಕು' ಮುಂತಾಗಿ ಪ್ರಚಾರ ನಡೆಸಲು ಹೊರಟಿದ್ದು (ತಮ್ಮದೆಷ್ಟೋ ಅಷ್ಟು ನೋಡಿಕೊಳ್ಳುವುದು ಬಿಟ್ಟು) ಸರಿಯೇ ತಪ್ಪೆ; ನಾವು ಪ್ರಕಟಿಸಿದ ಈ ಎಲ್ಲ ಸಂಗತಿಗಳು ಒಂದು ವಿಚಾರವನ್ನು ಕುರಿತಂಥವೇ ಅಥವಾ ಕೇವಲ ಒಂದು ಜಾತಿಯನ್ನೋ ಒಂದು ಪೀಠವನ್ನೋ ವಿರೋಧಿಸುವುದಕ್ಕಾಗಿಯೆ; ಮದುವೆ-ಅದರಲ್ಲೂ ಹೆಣ್ಣು ಮಕ್ಕಳ ಮದುವೆ ಸಕಾಲದಲ್ಲಿ (ಅಂದರೆ 20ರಿಂದ 24-25 ನೇ ವಯಸ್ಸಿನೊಳಗೆ) ಹಾಗೂ ಸುಸೂತ್ರವಾಗಿ ಆಗುವಂತೆ ಮಾಡುವುದಕ್ಕೆ ಈ ದೇಶದಲ್ಲಿ ಆಚರಣೆಗೆ ಯೋಗ್ಯವಾದಂಥ ನಿಮ್ಮ ಸಲಹೆಗಳೇನು; ಅವುಗಳನ್ನು ಈ ಮುಖಂಡರುಗಳೂ, ನೀವು–ನಾವು ಸಹ ಸೇರಿದಂತೆ ಎಲ್ಲರೂ ರೂಢಿಗೆ ತರುವಂತೆ ಮಾಡುವ ಬಗೆ ಹೇಗೆ–ಇವೇ ಮುಂತಾದ ವಿಚಾರಗಳ ಬಗ್ಗೆ ಕೇಂದ್ರೀಕರಿಸಬೇಕಾಗಿ ಸೂಚಿಸುತ್ತೇವೆ.

ಮತ್ತೊಮ್ಮೆ ನೆನಪಿಡಿ: ಆಕ್ರೋಶಕ್ಕೆ, ಸುಳ್ಳಿಗೆ, ವ್ಯಕ್ತಿಗತ ನಿಂದನೆಗೆ ಅವಕಾಶವಿಲ್ಲ. 'ವಾದೇ ವಾದೇ ಜಾಯತೇ ತತ್ವಬೋಧಃ' ಎಂದಿದ್ದಾರೆ ಹಿರಿಯರು. ಇಂಥ ವಾದ ಸತ್ಯದ ಬೆಳಕಿನಡಿ, ಸತ್ಯದ ಒರೆಗಲ್ಲಿನ ಮೇಲೆ ನಡೆಯಲಿ. ಸತ್ಯವನ್ನೆದುರಿಸುವ ಚೈತನ್ಯವಿಲ್ಲದವರು, ಅರ್ಥವಾದ ಸತ್ಯವನ್ನು ಒಪ್ಪಿ ಅರಗಿಸಿಕೊಳ್ಳುವ ಹೃದಯ ಶುದ್ಧಿಯಿಲ್ಲದವರು ಸತ್ಯದೊಂದಿಗೆ ಸಂವಾದ ನಡೆಸುವ ಈ ಸಾಹಸಕ್ಕೆ ಇಳಿಯದಿರಿ.

—ಸಂಪಾದಕ.

20. ಅಯ್ಯೋ ದೇವ್ರೆ! ಸನ್ಯಾಸಿಗೇನ್ಗೊತ್ತು ಸಂಸಾರದ್ನೋವು!?

(2ನೇ ಪುಟದಿಂದ)

ಹೊರ ತಂದು ತೋರ್ಸಿದಷ್ಟೂ ಘಟಶ್ರಾದ್ಧಗಳು ಸಂದಿ-ಮೂಲೇಲಿ ಘಟಸರ್ಪವಾಗಿ ಕಚ್ಚುತ್ಲೇ ಇವೆ.... ನಮಗೇನು ಬಿಡಿ. ಸ್ವಾಮಿಗಳಾದ್ರೂ ಮಾಡ್ಲಿ, ಮುಖಂಡರಾದ್ರೂ ಮಾಡ್ಲಿ (ಘಟಶ್ರಾದ್ಧ, ಬಹಿಷ್ಕಾರ, ಶುದ್ಧೀಕರಣ, ಇತ್ಯಾದಿ, ಇತ್ಯಾದಿಗಳನ್ನ.) ಮಾಡ್ನೋದು ಮಾಡಸ್ತೀರ, ದೂರಕ್ಕೋಗ್ಬ್ಯಶಿಡಿ. ವಾರಕ್ಕೊಂದು ಮಾಡ್ಲಿ. ನಮಿಗ್ಬೇಕಾದ್ದೂ ಭಾರಿ ಭೂರಿ ಭೋಜನ."

"ಹೇಳೋದು ಸುಲಭ—ಮಾಡೋದು ಕಷ್ಟ. ವಾರಕ್ಕೊಂದು ಹೇಗ್ಮಾಡೋಕಾಗ್ತದೆ?"

"ಆಗದೆ ಏನು, ಸಂದಿ–ಮೂಲೇಲಿರೋ ಬಾರು–ಮಿಲ್ಟ್ರಿ ಹೋಟೆಲಿಗೆಲ್ಲಾ ಕಾವಲು ಹಾಕೋದು. ಒಳಗೋಗ್ಬಿಗಿ ಹೊರಗ್ಬಂದೋರು ಚರಂಡಿ ಕಡೆ ಹೋದ್ರಾ, ಅವರ್ನ ಎಳಕಂಡ್ಬರೋದು, ಮುಖಂಡ್ರ ಮುಂದ್ನಿಲ್ಸೋದು, ಸ್ವಾಮಿಜಿಗೆ ಫೋನ್ ಮಾಡ್ಸೋದು–"ತಿಂದು ಕುಡ್ದೋರ್ನ ಹಿಡ್ದಿದ್ದೀವಿ; ಶ್ರಾದ್ಧ ಯಾವಾಗ ಮಾಡೋದು" ಅಂತ ಕೇಳೋದು. "ಕುಡ್ದೋರಿಗೆ ಶ್ರಾದ್ಧ ಮಾಡೋಕ್ಕಾಗಲ್ಲ" ಅಂತ ಉತ್ತರ ಕೊಟ್ರೆ "ಇಲ್ಲಾ ಮಾಡಬಹುದು" ಅನ್ನೋದು. "ಹೇಗೆ ಸಾಧ್ಯ?" ಅಂತ್ರಾರೆ.

"ನಮ್ಮ ಸಮಾಜದ ಘಟ ಶ್ರಾದ್ಧ ಕಲಮಿಗೆ ತಿದ್ದುಪಡಿ ತರೋಣ. 'ಕುಡ್ದೋನು ಜಾತಿ ಬಿಡೊಲ್ಲಾ ಅನ್ನೋ ಖಾತ್ರಿ ಇಲ್ದೆ ಇರೋದ್ರಿಂದ ಇವರನ್ನ ನಮ್ಮ ಜಾತಿ ಹೊರಗೆ ಹಾಕಿದ್ದೇವೆ. ಇವರ ಕುಟುಂಬದವರ ಕೈಲಿ ಶ್ರಾದ್ಧ ಮಾಡಿಸೋದು ಸೂಕ್ತವಾಗಿರುತ್ತೆ' ಅಂತ ಹೇಳಿ ಮುಖಂಡ್ರ ಹತ್ರ ಹೇಳ್ಸೋದು"

"ಇಲ್ಲಿ ಯಾರ್ದೋ ತಪ್ಪಿಗೆ ಯಾರಿಗೋ ಶಿಕ್ಷೆ. ಆ ಪಾಪದ ಬಾರು–ಹೋಟ್ಲು ಮುಚ್ಕೋಗ್ತವಲ್ಲ... ಪಾಪ!"

"ಮುಚ್ಚಿದ್ರೆ ಮುಚ್ಲಿ; ಬಾರಿಗಾಗಿ ಬ್ರಾಹ್ಮಣರಲ್ಲ."

ಆಮ್ಯಾಲಾಮೇಲೆ ಬಾರು–ಹೋಟ್ಲು ಕೈ ಬಿಟ್ಟು "ಗುಡ್ಡಾ–ಗುಡ್ಡಲ್ಲಿ (ಬೆಟ್ಟ-ಮಂಚಿಕೆ) ಪರಮಾತ್ಮನ ಸೇವೆ ನಡೆದ್ರೆ ಹ್ಯಾಗೆ ಹಿಡ್ಯೋದು?"

"ಅಲ್ಲೆ ಹೋಗಿ ಹಿಡ್ಯೋದ."

"ಮೊದ್ಲೆ ತಿಂದು–ಕುಡ್ದಿರ್ತಾರೆ. ಅದರಲ್ಲೂ ಗುಡ್ಡಲ್ಲಿ ಗದ್ದೆ ಕಾಯೋಂ ಕ್ಯಲಿ ಕೋವಿ ಇರ್ತದೆ. ಅಬ್ರಾಗೆ ತೆಗ್ದು ಕೊಟ್ರೆ. ಅವ್ರ ಶ್ರಾದ್ಧ ಅಲ್ಲ, ನಮ್ಮ ಶ್ರಾದ್ಧ ಆಗ್ತದೆ...

ಮತ್ತೆ.... ಮತ್ತೆ....

ಇನ್ನೊಂದು ತರದೋರ್ನ ಹಿಡಿಬೇಕು-ಇವ್ರಿಗೆ ಜಾತಿ ಭೇದ ಇಲ್ಲಾ. ಇದೊಂದು ಕೆಲಸಕ್ಕೆ ಎಲ್ಲಾ ಸಮಾನ.... ಅವ್ರೇ, ತೋಟದಲ್ಲಿ ಚಡ್ಡಿ ಜಾರ್ಸೋರು. ಅವ್ರನ್ನ ಹಿಡುದ್ರೆ ಎರಡೆರ್ಡು ಜನ ಸಿಕ್ತಾರೆ–ಒಂದು ಹೆಣ್ಣು, ಒಂದು ಗಂಡು. ಪುಣ್ಯಾತ್ಮರು–'ಪರಿಸರ–ಪ್ರೇಮಿ'ಗಳಿವರು.

ಹೀಗೇ ಹಿಡೀತಾ ಹೋದ್ರೆ ಸಮಾಜದ ಪರ(ಸೆಂಟು) ಎಷ್ಟು ಉಳಿಯೋರು....? ....?....?

....

ಪ್ರಿಯ ವಾಚಕರೆ,

ಮೇಲಿಂದೆಲ್ಲ ಅಣಕವಾಗಿದ್ದರೂ ಸಹ ನೋವಿಗೆ ಸ್ಪಂದಿಸುವಷ್ಟು ಪ್ರಯತ್ನಿಸಿದ್ದೇನೆ ಬಹಿಷ್ಕಾರದ ಪುಟಗಳನ್ನೆಲ್ಲಾ ವಿಮರ್ಶಿಸಿದಾಗ ಎಷ್ಟು ಸತ್ಯ ಹೊರಬರಬೇಕೋ ಅಷ್ಟೂ ಸತ್ಯ ಹೊರ ಬಂದಿದೆ. ಎಡೆಗಾರಿಕೆ ಇರೋ ನಾಗರಾಜ್ ಏನೋ ಬಹಿರಂಗ ಪಡಿಸಿದರು. ಮನೆ ಮುರುಕ ಶಕ್ತಿಗಳಿಂದ ಅಂತರಂಗದಲ್ಲಿ ನೋವು ತಿನ್ನುತ್ತಿರುವವರನ್ನು ನಾವು ಮತ್ತು ನೀವು ಎಷ್ಟು ಜನರನ್ನು ನೋಡಿಲ್ಲ? (ದ್ದೇವೆ!): ಹೆಣ ಮರೆಯಲ್ಲಿಟ್ಟು ಕದ್ದು ಅಳುವವರಿಗೆ ಸ್ಪಂದಿಸುವುದಾದರೂ ಹೇಗೆ?

ಯಾವುದೇ ಜಾತಿಯವರಾಗಿರಲಿ, ಒಂದು ಹೆಣ್ಣನ್ನು ಬಲವಂತವಾಗಿ ಕೆಡಿಸಿದರೆ ನಿಜಕ್ಕೂ ವ್ಯಸನ–ದುಃಖ ಪಡುವಂಥಾದ್ದು. ಇದಕ್ಕೆ ಪರಿಹಾರ–ಪ್ರಾಯಶ್ಚಿತ್ತವೆಂದರೆ ಬಹಿಷ್ಕಾರ–ಬಡಿಗೆ ಇವೆಲ್ಲವೂ ತಪ್ಪಿಗೆ ತಕ್ಕ ಪ್ರತಿಫಲವೆಂದು ಒಪ್ಪಿಕೊಳ್ಳುವಂಥಾದ್ದು. ಅದಲ್ಲದೆ ಅವರವರ ಆತ್ಮೀಯ ಒಪ್ಪಿಗೆಯಿಂದ ಒಂದು ಸಂಬಂಧ ನಡೆದರೆ ಪ್ರಾಯಶ್ಚಿತ್ತ ಯಾರಿಗೆ ಎನ್ನುವುದು ಮಾನವೀಯ ಪ್ರಶ್ನೆಯಾಗಬೇಕು.

ಸಮಾಜದ ಕಟ್ಟು ಪಾಡಿಗೆ ಬಲಿಬಿದ್ದು ಇತ್ತ ಹೆತ್ತ ಮಕ್ಕಳನ್ನು ಬಿಡಲಾರದೆ, ಅತ್ತ ಸಮಾಜವನ್ನೂ ಬಿಡಲಾರದೆ ತಮ್ಮನ್ನೆ ತಾವು ಆತ್ಮಾಹುತಿಗೈದ ಕರುಳು ಮಿಡಿಯುವ ಸುದ್ದಿಗಳನ್ನು ಪತ್ರಿಕೆಗಳಲ್ಲಿ, ಇತರೆ ಸುದ್ದಿ ಮಾಧ್ಯಮಗಳಲ್ಲಿ ನೋಡ್ತೇವೆ. ಆದರೂ ನಾವು ಒರಟಾಗುತ್ತಲೇ ಹೋಗುತ್ತಿದ್ದೇವೆ.

ವೇದೋಪನಿಷತ್ತುಗಳ ಪ್ರಕಾರ "ಬ್ರಾಹ್ಮಣ" ಅನ್ನೋ ಪದಕ್ಕೆ ಅರ್ಥವನ್ನ ಪಂಡಿತರು ತಿಳಿಸಬೇಕು. ಆ ಅರ್ಥವನ್ನ ನಾವು ಗ್ರಹಿಸುವುದಾದರೆ ಈ ಸಮಾಜದಲ್ಲಿ ಎಷ್ಟು ಜನ ಬ್ರಾಹ್ಮಣರು ಉಳಿದಾರು? ಹೀಗೆ ಹೇಳಿದ ಮಾತ್ರಕ್ಕೆ ನನ್ನನ್ನು 'ಬ್ರಾಹ್ಮಣ ವಿರೋಧಿ' ಎಂದರೆ ತಪ್ಪು ತಿಳುವಳಿಕೆ ಎನ್ನಬೇಕಾಗುತ್ತದೆ. ತಮ್ಮ ತಮ್ಮ ಆತ್ಮ ಪರಿಶೋಧನೆ ಮಾಡಿಕೊಳ್ಳಿ ಎನ್ನುವುದು ನನ್ನ ವಿನಮ್ರ ಮನವಿ.

ಬ್ರಾಹ್ಮಣರಲ್ಲದವರು ಈ ಅಂತರಂಗಕ್ಕೂ ಬಹಿರಂಗಕ್ಕೂ ಇರುವ ಅಂತರದಲ್ಲಿ ಬಲಿಪಶುಗಳಾಗಿರುವುದಂತೂ ಸತ್ಯ ಸಂಗತಿ. ಏಕೆಂದರೆ ಇತರೆ ಜಾತಿ ಹುಡುಗ–ಬ್ರಾಹ್ಮಣಕನ್ಯೆ ಅಥವಾ ಬ್ರಾಹ್ಮಣ ಹುಡುಗ –ಇತರೆ ಜಾತಿ ಹುಡುಗಿ ಒಪ್ಪಿ ವಿವಾಹವಾದರೆ, ಹೇಗಿದ್ದರೂ ಒಬ್ಬರು ನಿಮ್ಮವರೇ. (ಇಂದಲ್ಲ ನಾಳೆಯಾದರೂ). ಹೀಗಿದ್ದೂ ಬಹಿಷ್ಕಾರ ವಗೈರೆಗಳು ನಡೆಯುತ್ತಿದ್ದರೆ, ಈ ಎರಡೂ ಅಲ್ಲದ ನಮ್ಮಗಳಲ್ಲಿ ನಿಮ್ಮಗಳ ಹೊಂದಾಣಿಕೆ ಕೇವಲ ಬೂಟಾಟಿಕೆಯ ಬಹಿರಂಗವೆ? ಹಾಗಿದ್ದಲ್ಲಿ "ಹಿಂದೂ" ಅನ್ನೊ ಅರ್ಥದಲ್ಲಿ ನಾವೆಲ್ಲಾ ಹೇಗೆ ಸ್ಪಂದಿಸುವುದು? ಈ ಪರಿಸ್ಥಿತಿಯಲ್ಲಿ ನಮ್ಮಗಳಿಗೆ "ಹಿಂದುತ್ವ" ಬೇಕೆ? (ವಿಚಾರವಂತ ಪ್ರಾಜ್ಞರು ಅಂತಃಕರಣ ಶುದ್ಧಿಯಿಂದ ವಿಮರ್ಶೆ ಮಾಡಬೇಕು.) ಇದು ಕೇವಲ ಸಿರಿಮನೆಯವರ ವಿಚಾರಕ್ಕಾಗಿ ಮಾತ್ರ ಬರೆಯುವುದಲ್ಲ. "ಹಿಂದೂ ಸಮಾಜದಲ್ಲಿ ನಮ್ಮಗಳ ಪಾತ್ರ" ಅನ್ನೋ ಬಗ್ಗೆ ನಾವುಗಳೆಲ್ಲಾ ಜಾಗರೂಕತೆಯಿಂದ ಅರಿಯ ಬೇಕಾಗಿದೆ.

ಸಂದರ್ಶನದ ಲೇಖನದ ಪ್ರಕಾರ ಸ್ವಾಮೀಜಿಯವರು ಸಂದರ್ಶನದಲ್ಲಿ "ಬ್ರಾಹ್ಮಣರ ಮನೆ ಪಕ್ಕ, ಮಠದ ಪಕ್ಕ ಸರ್ಕಾರಿ ಜಾಗ ಇದ್ದರೆ ಅಲ್ಲಿ ಹರಿಜನರು ವಾಸಿಸಲಿ" ಎಂದಿರುವುದು ಅವರ ಅಂತರಂಗದ ನೆಸಗುದಿಯನ್ನು ಎತ್ತಿ ತೋರಿಸುತ್ತದೆ. ಇದಕ್ಕೆ ನನ್ನ ಅಭಿಪ್ರಾಯವೇ ಬೇರೆ. ಹರಿಜನ ಕೇರಿಯೊಳಗೆ ಸ್ವಾಮಿಗಳಿಗೆ ಜಾಗ ಕೊಡಿಸುತ್ತೇವೆ. (ಇದು ಸವಾಲಲ್ಲ. ಸಮಾನತೆಯ ಪ್ರಶ್ನೆ.) ಅಲ್ಲಿ ಸ್ವಾಮಿಗಳು ವಾಸಿಸುವುದಾದರೆ (ಈ ಒಬ್ಬ ಸ್ವಾಮೀಜಿ ಅಲ್ಲ, ಎಲ್ಲಾ ಜನಾಂಗದ ಸ್ವಾಮಿಗಳೂ) ತಕ್ಕಮಟ್ಟಿಗೆ ಸಮಸ್ಯೆಗೆ "ಇತಿಶ್ರೀ" ಹಾಡಬಹುದು. ಏಕೆಂದರೆ ಸ್ವಾಮಿಗಳಿರುವೆಡೆ ಶಿಷ್ಯರು–ಸಿಬ್ಬಂದಿ ಇರುತ್ತಾರೆ; ಮುಖಂಡರು, ಸಾರ್ವಜನಿಕರು ಹೋಗಿಬರುವುದು ರೂಢಿ; ಆಗ ಎಲ್ಲರೂ ಅಲ್ಲಿ ಬೆರೆಯಬಹುದು.... ಅಲ್ಲವೆ? ಇದಕ್ಕೆ ನೊಟ್ಟಮೊದಲಿಗರಾಗಿ ಬೇರೆ ಸ್ವಾಮಿಗಳಿಗೆ ಹರಿಹರಪುರ ಮಠದ ಶ್ರೀಗಳವರು ಮಾರ್ಗದರ್ಶಿಗಳಾಗಬಲ್ಲರೆ?

ಬೇರೆಲ್ಲಾ ಜಾತಿಗಳವರಂತೆ ಬ್ರಾಹ್ಮಣ ಜಾತಿಗಳಲ್ಲೂ ಉತ್ತಮ ಮಿತ್ರರನ್ನು ಪಡೆದಿರುವ ನನಗೆ ಅಲ್ಲೊಂದು ಇಲ್ಲೊಂದು ಜಾತಿಯ ನೋವು ತರುವಂಥ ಘಟನೆಗಳು ನಡೆಯುತ್ತಿದ್ದರೂ ಅವೆಲ್ಲವೂ ಈ ನನ್ನ ಮಿತ್ರರ ಸನ್ನಡತೆಯಲ್ಲಿ ಮುಚ್ಚಿದ್ದವು.

ಈಗಿನ ಈ ವಿವಾದ ಕೊನೆಗೊಳಿಸುವಲ್ಲಿ ನನ್ನ ಅಭಿಪ್ರಾಯ ಮತ್ತು ಆಗ್ರಹ: "ಸರ್ವೇ ಜನಾಃ ಸುಖಿನೋ ಭವಂತು" ಎನ್ನುವುದರಲ್ಲಿ ಶ್ರೀಗಳವರಿಗೆ ನಂಬಿಕೆ–ವಿಶ್ವಾಸವಿದ್ದರೆ ಈ ಸಿರಿಮನೆ ಕುಟುಂಬದ ಈ ತಂದೆ-ತಾಯಿ, ಅಣ್ಣ–ತಮ್ಮಂದಿರು, ಅಕ್ಕ–ತಂಗಿ, ಭಾವ–ಮೈದುನರನ್ನೆಲ್ಲಾ ತಮ್ಮ ಮಠಕ್ಕೆ ಕರೆಸಿ ಇವರನ್ನೆಲ್ಲಾ ಒಂದುಗೂಡಿಸಿ ಆಶೀರ್ವಾದ ನೀಡಿ, ಸಮಾಜದ ಉಳಿದೆಲ್ಲರೂ ಹಿಂದಿನಂತೆಯೇ ಈ ಇಡೀ ಕುಟುಂಬದೊಡನೆ ಸಂಬಂಧ ಇಟ್ಟುಕೊಳ್ಳುವಂತೆ ತಮ್ಮ ಪೀಠದ ಹಕ್ಕು ಮತ್ತು ಕರ್ತವ್ಯಗಳನ್ನು ಚಲಾಯಿಸಿ ಆದೇಶ ನೀಡಿ ಕಳುಹಿಸಿದರೆ ನಿಜಕ್ಕೂ ಒಂದು ಹೆಮ್ಮೆಯ ಕಾರ್ಯ ನಡೆಸಿದಂತಾಗುತ್ತದೆ.

—ಎಂ. ಐ. ಶ್ರೀನಿವಾಸ ಮೂರ್ತಿ
ಮೂಡಬಾಗಿಲು

"ಹೆಗ್ಗಾರುಕೊಡಿಗೆಗೆ ಬಸ್ ಬರುತ್ತಿಲ್ಲ"

ಮಾನ್ಯರೆ,

ಶಿವಮೊಗ್ಗದಿಂದ ಎನ್. ಆರ್. ಪುರ, ಕೊಪ್ಪ, ಜಯಪುರ, ಹೆಗ್ಗಾರುಕೊಡಿಗೆ, ಬಸರಿಕಟ್ಟೆ ಮಾರ್ಗದ ಯುನೈಟೆಡ್ ರೋಡ್‌ವೇಸ್ ಇವರ ಬಸ್ಸು ಇತ್ತೀಚಿಗೆ ಹೆಗ್ಗಾರುಕೊಡಿಗೆಗೆ ಬರುತ್ತಿಲ್ಲ. ಇದು ಬಸರಿಕಟ್ಟೆಯಿಂದ ಶಿವಮೊಗ್ಗಕ್ಕೆ ಹೋಗುವಾಗ ಬೆಳಗಿನ 5–45 ಗಂಟೆಗೂ ವಾಪಸ್ ಹೋಗುವಾಗ ರಾತ್ರಿ 9–30 ಗಂಟೆಗೂ ಹೆಗ್ಗಾರುಕೊಡಿಗೆಗೆ ಬರಬೇಕೆಂದು ಅದರ ಸಮಯ ಸೂಚಿಯಲ್ಲಿದೆ.

ಈ ವಿಷಯವನ್ನು ಕೊಪ್ಪದಲ್ಲಿರುವ ಮೇಲ್ಕಂಡ ಬಸ್ಸಿನ ಮಾಲೀಕರ ಕಛೇರಿಗೆ ವಿಚಾರಿಸಲು ಹೋದಾಗ ನಮ್ಮನ್ನು ಆಫೀಸಿನ ಗೇಟಿನ ಒಳಗೆ ಬಿಟ್ಟಿಲ್ಲ. ಈ ವಿಷಯವನ್ನು ಜಯಪುರದ ಈ ಬಸ್ಸಿನ ಏಜಂಟರಲ್ಲಿ ಪ್ರಸ್ತಾಪಿಸಿದಾಗ ಅವರು ಉದ್ಧಟತನದ ಮಾತನ್ನು ಆಡಿರುತ್ತಾರೆ.

ಮೇಲ್ಕಂಡ ಬಸ್ಸು ಗ್ರಾಮಾಂತರ ಪ್ರದೇಶವಾದ ನಮ್ಮಲ್ಲಿಗೆ ಬರಲು ಸಂಬಂಧಪಟ್ಟ ಅಧಿಕಾರಿಗಳು ಶ್ರಮಿಸುವರೇ?

—ಹೆಗ್ಗಾರುಕುಡಿಗೆ ಗ್ರಾಮಸ್ಥರು.
(9 ಸಹಿಗಳಿವೆ)

ಶಿವಮೊಗ್ಗ ಅಡಿಕೆ ಧಾರಣೆ
ತಾ|| 10.7.1987

ಸರಕು : 4609 – 5610
ಬೆಟ್ಟೆ : 2300 – 2900
ಗೊರಬಲು: 870 – 1325

ಸಾಗರ ಅಡಿಕೆ ತಾ|| 9.7.1987

ಇಡಿ ಅಡಿಕೆ ರೂ. 1826–2052
ಆಪಿ ರೂ. 3731–4399
ಚಾಲಿ ರೂ. 1290–1400
ಸಿಪ್ಪೆ ಗೋಟು ರೂ. 249–429
ಮೆಣಸು ರೂ. 5029–5229

ಮಂಗಳೂರು ಧಾರಣೆ

ದಿನಾಂಕ 11–7–87

ಏಲಕ್ಕಿ ರೂ. 132–160
ಕಾಳು ಮೆಣಸು 5640

ಶಿವಮೊಗ್ಗ ಜಿಲ್ಲಾ ಜಿಲ್ಲಾಧಿಕಾರಿಗಳ ಕಾರ್ಯಾಲಯ

ಶಿವಮೊಗ್ಗ.

ಪ್ರಕಟಣೆ ನಂ: ಇಎಲ್ಎಸ್/ಸಿಆರ್/9/87–88 ದಿನಾಂಕ : 13–7–87.

ಪ್ರಸ್ತಾವನೆ :

ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರಾಟ ಸಮಿತಿಯ ಸದಸ್ಯರಾಗಿದ್ದ ಶ್ರೀಯುತ ಕೆ. ಎನ್. ವೀರಪ್ಪಗೌಡರ ನಿಧನದಿಂದಾಗಿ, ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರಾಟ ಸಮಿತಿಯ ಶೃಂಗೇರಿ ವ್ಯವಸಾಯಗಾರರ ಕ್ಷೇತ್ರದ ಒಂದು ಸದಸ್ಯ ಸ್ಥಾನವು ಖಾಲಿಯಾಗಿದ್ದು, ಸದರಿ ಸ್ಥಾನವನ್ನು ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ 1986 ರ 28ನೇ ಪ್ರಕರಣ ರೀತ್ಯಾ ಸಾಂದರ್ಭಿಕ ಸ್ಥಾನವನ್ನಾಗಿ ಪರಿಗಣಿಸಿ ತುಂಬುವ ಸಲುವಾಗಿ ಚುನಾವಣೆ ನಡೆಸಲು ಉದ್ದೇಶಿಸಿ, ಸಂಬಂಧಪಟ್ಟವರ ಅವಗಾಹನೆಗಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.

: ಪ್ರಕಟಣೆ :

ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ)ಕಾಯಿದೆ 1966ರ ಪ್ರಕರಣ 13 ಹಾಗೂ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ನಿಯಮಗಳು 1968ರ 6 ನೇ ನಿಯಮಾನುಸಾರ ಪ್ರದತ್ತವಾದ ಅಧಿಕಾರದನ್ವಯ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾದ ತಪನ್ ಸೇನಾಪತಿ ಎಂಬ ನಾನು ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರಾಟ ಸಮಿತಿಯ ಶೃಂಗೇರಿ ವ್ಯವಸಾಯಗಾರರ ಕ್ಷೇತ್ರದ ಖಾಲಿ ಇರುವ ಒಂದು ಸದಸ್ಯ ಸ್ಥಾನವನ್ನು ಚುನಾವಣೆ ನಡೆಸುವುದರ ಮೂಲಕ ಭರ್ತಿ ಮಾಡಲು ಉದ್ದೇಶಿಸಿ, ಈ ಪ್ರಕಟಣೆಯನ್ನು ಕ್ಷೇತ್ರದ ಮತದಾರರ ಅವಗಾಹನೆಗಾಗಿ ಪ್ರಕಟಪಡಿಸಿರುತ್ತೇನೆ. ಚುನಾವಣಾ ವೇಳಾಪಟ್ಟಿಯನ್ನೂ ಸಹ ಸಂಬಂಧಪಟ್ಟವರ ಅವಗಾಹನೆಗಾಗಿ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

(ಸಹಿ) **ತಪನ್ ಸೇನಾಪತಿ**
ಜಿಲ್ಲಾಧಿಕಾರಿಗಳು,
ಶಿವಮೊಗ್ಗ ಜಿಲ್ಲೆ.

ಶಿವಮೊಗ್ಗ ಜಿಲ್ಲಾ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ

ಕ್ರಮಾಂಕ: ಇ ಎಲ್ ಎಸ್. ಸಿ ಆರ್/9/87–88 ದಿನಾಂಕ: 13ನೇ ಜುಲೈ 1987

ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರಾಟ ಸಮಿತಿಯ ಶೃಂಗೇರಿ ವ್ಯವಸಾಯಗಾರರ ಕ್ಷೇತ್ರದ ಒಬ್ಬ ಸದಸ್ಯರ ಸಾಂದರ್ಭಿಕ ಸ್ಥಾನಕ್ಕಾಗಿ ನಡೆಸಲಿರುವ ಚುನಾವಣೆಯ

ತಿಳುವಳಿಕೆ

(ನಿಯಮ 7ನ್ನು ಗಮನಿಸಿ)

ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರಾಟ ಸಮಿತಿಯ ಶೃಂಗೇರಿ ವ್ಯವಸಾಯಗಾರರ ಕ್ಷೇತ್ರದ ಒಬ್ಬ ಸದಸ್ಯ ಸ್ಥಾನವನ್ನು ಸಾಂದರ್ಭಿಕ ಸ್ಥಾನವಾಗಿ ತುಂಬಲು ಈ ಚುನಾವಣಾ ತಿಳುವಳಿಕೆಯನ್ನು ಹೊರಡಿಸಲಾಗಿದೆ.

ಕ್ಷೇತ್ರದ ಹೆಸರು	ಚುನಾಯಿಸಬೇಕಾದ ಸದಸ್ಯರ ಸಂಖ್ಯೆ:
1. ಶೃಂಗೇರಿ ವ್ಯವಸಾಯಗಾರರ ಕ್ಷೇತ್ರ	ಒಂದು (1)

1. ನಾಮ ನಿರ್ದೇಶನದ ಪತ್ರಗಳನ್ನು ನಿರ್ವಾಚನಾಧಿಕಾರಿ ಹಾಗೂ ತಹಸೀಲ್ದಾರ್, ಶೃಂಗೇರಿ ತಾಲ್ಲೂಕು ಇವರಿಗೆ ಅಥವಾ ಇವರಿಂದ ಅಧಿಕಾರ ಹೊಂದಿದವರಿಗೆ ದಿನಾಂಕ: 28–7–87 (ಮಂಗಳವಾರ) ಅಥವಾ ಅದಕ್ಕೆ ಮುಂಚಿತವಾಗಿ ಸಾರ್ವತ್ರಿಕ ರಜಾ ದಿನಗಳ ಹೊರತಾಗಿ ಯಾವ ದಿನವಾದರೂ ಪೂರ್ವಾಹ್ನ 11–00 ಘಂಟೆಯಿಂದ ಅಪರಾಹ್ನ 3–00 ಘಂಟೆಯವರೆಗೆ ಶೃಂಗೇರಿ ತಾಲ್ಲೂಕು ಕಛೇರಿಯಲ್ಲಿ ಅಭ್ಯರ್ಥಿಗಳಾಗಲೀ ಅಥವಾ ಅವರ ಸೂಚಕರಾಗಲೀ ಸಲ್ಲಿಸಬಹುದಾಗಿರುತ್ತೆ.

2. ನಾಮ ನಿರ್ದೇಶನ ಪತ್ರದ ನಮೂನೆಗಳನ್ನು ಶೃಂಗೇರಿ ತಾಲ್ಲೂಕು ಕಛೇರಿಯಲ್ಲಿ ಸಾರ್ವತ್ರಿಕ ರಜಾ ದಿನಗಳನ್ನು ಹೊರತು ಪಡಿಸಿ, ಉಳಿದ ದಿನಗಳಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ನಿಗದಿತ ಶುಲ್ಕ ಪಾವತಿಸಿ, ಪಡೆಯಬಹುದಾಗಿರುತ್ತೆ.

3. ನಾಮ ನಿರ್ದೇಶನ ಪತ್ರಗಳನ್ನು ದಿನಾಂಕ: 30–7–87 ರಂದು (ಗುರುವಾರ) ಬೆಳಗ್ಗೆ 11–00 ಘಂಟೆಗೆ ಶೃಂಗೇರಿ ತಾಲ್ಲೂಕು ಕಛೇರಿಯಲ್ಲಿ ಪರಿಶೀಲನೆ ಮಾಡಲಾಗುವುದು.

4. ನಾಮ ನಿರ್ದೇಶನ ಪತ್ರಗಳನ್ನು ವಾಪಸ್ ಪಡೆಯುವ ಬಗ್ಗೆ ಸೂಚನೆಗಳನ್ನು ಶೃಂಗೇರಿ ತಾಲ್ಲೂಕು ಕಛೇರಿಯಲ್ಲಿ ನಿರ್ವಾಚನಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಹೊಂದಿದವರಿಗೆ ದಿನಾಂಕ: 3–8–87 ರಂದು (ಸೋಮವಾರ) ಸಂಜೆ 5–00 ಘಂಟೆಗೆ ಮುಂಚಿತವಾಗಿ ಅಭ್ಯರ್ಥಿಯಾಗಲೀ ಅಥವಾ ಅವರ ಸೂಚಕರಾಗಲೀ ಸಲ್ಲಿಸಬಹುದಾಗಿರುತ್ತೆ.

5. ಚುನಾವಣೆಯು ಅನಿವಾರ್ಯವಾದರೆ, ದಿನಾಂಕ: 30–8–87 ರಂದು (ಭಾನುವಾರ) ಬೆಳಗ್ಗೆ 8–00 ಘಂಟೆಯಿಂದ ಸಂಜೆ 4–00 ಘಂಟೆಯವರೆಗೆ ಮತದಾನ ನಡೆಯುವುದು.

6. ಮತಗಳ ಎಣಿಕೆಯು ಶೃಂಗೇರಿ ತಾಲ್ಲೂಕು ಕಛೇರಿಯಲ್ಲಿ ದಿನಾಂಕ: 31–8–87 ರಂದು (ಸೋಮವಾರ) ಬೆಳಗ್ಗೆ 9–00 ಘಂಟೆಗೆ ಪ್ರಾರಂಭವಾಗುವುದು.

7. ಚುನಾವಣೆ ಕಾರ್ಯಾಚರಣೆಯು ದಿನಾಂಕ 5–9–1987 ರೊಳಗಾಗಿ ಮುಕ್ತಾಯವಾಗುವುದು.

(ಸಹಿ) **ತಪನ್ ಸೇನಾಪತಿ**
ಜಿಲ್ಲಾಧಿಕಾರಿಗಳು
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಜಿ.ಪ. ಕಛೇರಿ ಮುಂದೆ ಸಿ.ಪಿ.ಐ. ಧರಣಿ

ಚಿಕ್ಕಮಗಳೂರು: ಕೂಡಲೇ ಮಂಡಲ ಪಂಚಾಯ್ತಿಗಳಿಗೆ ಕಾರ್ಯದರ್ಶಿಗಳ ನೇಮಕ, ಹಣ ಬಿಡುಗಡೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು— ಇವುಗಳಿಗಾಗಿ ಒತ್ತಾಯಿಸಿ ಜು. 1ರಂದು ಜಿ.ಪ. ಕಚೇರಿಯ ಮುಂದೆ ಜಿಲ್ಲೆಯ ಎಲ್ಲಾ ಮಂ. ಪಂ. ಸದಸ್ಯರು, ಜಿ. ಪ. ಮತ್ತು ಮಂಡಲ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಒಂದು ದಿನ ಧರಣಿ ನಡೆಸಿದರು ಜಿ.ಪ.ಉಪಾಧ್ಯಕ್ಷರು ಮನವಿ ಸ್ವೀಕರಿಸಿದರು

ಸರಳ ವಿವಾಹ

ಶೃಂಗೇರಿ: ಈ ತಾಲ್ಲೂಕಿನ ವೈಕುಂಠಪುರದ ಕೆ.ಜಿ. ಸುರೇಶ್ ಮತ್ತು ಗುಂಡ್ರೆಯ ಸುನಂದ ಎಂಬವರು ಅದ್ದೂರಿ–ಆಡಂಬರಗಳಿಲ್ಲದೆ, ವರದಕ್ಷಿಣೆ–ವರೋಪಚಾರಗಳ ಗೌಜಿಲ್ಲದೆ ಜುಲೈ 3 ರಂದು ನೆಂಟರಿಷ್ಟರ ಸಮ್ಮುಖದಲ್ಲಿ ಸರಳರೀತಿಯಲ್ಲಿ ವಿವಾಹವಾದರು.

ಕೊಪ್ಪಕ್ಕೊಂದುಆಯುರ್ವೇದ ಕಾಲೇಜ್ ಮಂಜೂರು

ಕೊಪ್ಪ: ಇಲ್ಲಿ ಆಯುರ್ವೇದ ಕಾಲೇಜೊಂದನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಅಸಿತಾ ಶಿಕ್ಷಣ ಸಂಸ್ಥೆ ಎಂಬ ವಿದ್ಯಾಸಂಸ್ಥೆಗೆ ಅನುಮತಿ ನೀಡಿರುವುದಾಗಿ ವರದಿಯಾಗಿದೆ.

ಕೃಷಿ ಸಾಮಗ್ರಿ ವಿತರಣೆ

ನೆಮ್ಮಾರು: 74 ಮಂದಿ ಹರಿಜನ/ಗಿರಿಜನ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಔಷಧಿಗಳು ಮುಂತಾಗಿ ಸುಮಾರು 40 ಸಾವಿರ ರೂ ಬೆಲೆಯ ಸೌಲತ್ತುಗಳನ್ನು ಜುಲೈ. 4ರಂದು ಮಂಡಲ ಪ್ರಧಾನರಾದ ಎಂ. ಜಿ. ಸುಧಾಕರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶಾಸಕ ಎಚ್.ಜಿ.ಗೋವಿಂದಗೌಡರು ವಿತರಿಸಿದರು. ಜಿ.ಪ ಸದಸ್ಯ ಕೆ. ವಿ. ರಾಮಪ್ಪಯ್ಯ ಮುಖ್ಯ ಅತಿಥಿಯಾಗಿದ್ದರು. ಸ|ಕೃಷಿ ನಿರ್ದೇಶಕ ರಂಗದಾಸ ಶೆಟ್ಟಿ ಸ್ವಾಗತಿಸಿ ದೇವೇಂದ್ರ ವಂದಿಸಿದರು.

ಇದೇ ಮುಂಗಾರಿನಲ್ಲಿ ಸಣ್ಣ, ಅತಿ ಸಣ್ಣ ರೈತರಿಗೆ 200 'ಮಿನಿ ಕಿಟ್' (ತೃಣಧಾನ್ಯ ಕಿರು ಚೀಲ!)ಗಳನ್ನು ವಿತರಿಸಲಾಗಿದೆಯೆಂದು ರಂಗದಾಸ ಶೆಟ್ಟಿ ತಿಳಿಸಿದ್ದಾರೆ.

ಉಪನ್ಯಾಸ ಕಾರ್ಯಕ್ರಮ

ಜಯಪುರ: ಕಂಪ್ಯೂಟರ್ ವಿಜ್ಞಾನದಲ್ಲಿ ಇಂಜಿನಿಯರಿಂಗ್ ಮಾಡಿರುವ ಜಯಪುರದವರೇ ಆದ ಜೆ.ಎ. ಲಕ್ಷ್ಮೀನಾರಾಯಣ ಅವರು ಇಲ್ಲಿನ ಪ್ರೌಢಶಾಲೆಯ ವಿಜ್ಞಾನ ಸಂಘದ ಆಶ್ರಯದಲ್ಲಿ ಉತ್ತಮವಾದ ಉಪನ್ಯಾಸವೊಂದನ್ನು ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಅಧ್ಯಾಪಕರಾದ ಅಶ್ವತ್ಥನಾರಾಯಣ ವಹಿಸಿದ್ದರು.

ಬೀಳ್ಕೊಡುಗೆ

ಕೊಪ್ಪ: ಇಲ್ಲಿ ಪೋಸ್ಟ್ ಮಾಸ್ಟರ್ ಆಗಿದ್ದು. ಬಡ್ತಿಯೊಂದಿಗೆ ಮೈಸೂರಿಗೆ ವರ್ಗವಾಗಿರುವ ಬಿ. ಗೋವಿಂದ ಅವರಿಗೂ, ಬೆಂಗಳೂರಿಗೆ ವರ್ಗಹೊಂದಿರುವ ಕೇಶವ ಅವರಿಗೂ ಅಂಚೆ ಕಛೇರಿಯಲ್ಲಿ ಜು. 8 ರಂದು ಬೀಳ್ಕೊಡುಗೆ ನೀಡಲಾಯಿತು. ಅಂಚೆ ಇನ್‌ಸ್ಪೆಕ್ಟರ್ ಎಲ್. ತಂಗರಾಜನ್ ಅಧ್ಯಕ್ಷತೆ ವಹಿಸಿದ್ದರು, ರಾಮಚಂದ್ರ ಸ್ವಾಗತಿಸಿ, ಕೃಷ್ಣಮೂರ್ತಿ ವಂದಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ